ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು,
ನೃಪತುಂಗ ರಸ್ತೆ, ಬೆಂಗಳೂರು–560 001

ಸಂಖ್ಯೆ: ಸಿ1(7) ಸ್ವ.ಚಾ.ಬ(ಹಂತ–2) ಬಡ್ತಿ: 158/2009–10 ದಿನಾಂಕ:– 22–09–2010

**–: ಅಧಿಕೃತ ಜ್ಞಾಪನ :–**

ವಿಷಯ:–ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ

ಉಲ್ಲೇಖ:–1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್‌ಡಿಇ 2005 ದಿ:–04–04–2005
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಇ.ಡಿ 703 ಡಿ.ಪಿ.ಐ 2006, ದಿನಾಂಕ:–03–07–2007 ಮತ್ತು ಇ ಡಿ 111 ಡಿ. ಪಿ.ಐ 2008, ದಿನಾಂಕ:–30–10–2008
3) ಸರ್ಕಾರದ ಅಧಿಸೂಚನೆ ಸಂಖ್ಯೆ: ಇ.ಡಿ.250: ಡಿ.ಪಿ.ಐ 2006 ದಿನಾಂಕ:–22–02–2008
4) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 464: ಡಿ.ಪಿ.ಐ 2008 ದಿನಾಂಕ:–06–01–2009
5) ಸರ್ಕಾರದ ಆದೇಶದ ಸಂಖ್ಯೆ: ಎಫ್‌ಡಿ 25 ಎಸ್‌ಆರ್‌ಪಿ 91 ದಿನಾಂಕ:–01–02–1993
6) ದಿನಾಂಕ:–18–08–2010 ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಗಳು

********

ಪ್ರಸ್ತಾವನೆ:

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರಾತಿಯನ್ನು ಇದುವರೆಗೆ ಗ್ರೂಪ್–ಬಿ ನೇಮಕಾತಿ ಪ್ರಾಧಿಕಾರವಾಗಿದ್ದ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿತ್ತು.

ಉಲ್ಲೇಖ: (1) ರ ಸರ್ಕಾರದ ಅಧಿಸೂಚನೆ ಪ್ರಕಾರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರನ್ನು ಪ್ರೌಢಶಾಲಾ ಮುಖ್ಯ ಶಿಕ್ಷಕರು ವೃಂದದ (ಗ್ರೂಪ್–ಬಿ) ಅಧಿಕಾರಿಗಳ ನೇಮಕಾತಿ ಪ್ರಾಧಿಕಾರ ಎಂದು ನೇಮಿಸಿ ಸರ್ಕಾರವು ಆದೇಶ ಹೊರಡಿಸಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಇ ಡಿ 377 ಡಿ. ಪಿ. ಐ 95 ದಿನಾಂಕ:09–10–1993 ರಲ್ಲಿ ಪ್ರೊಭೇಷನರಿ ಮುಖ್ಯ ಶಿಕ್ಷಕರಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಆಯ್ಕೆಹೊಂದಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗ್ರೂಪ್–ಬಿ ವೃಂದದಲ್ಲಿ ಒಟ್ಟು 502 ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು ಇವರುಗಳಲ್ಲಿ 402 ಅಧಿಕಾರಿಗಳಿಗೆ ಉಲ್ಲೇಖ (2) ರಂತೆ ಶಿಕ್ಷಣಾಧಿಕಾರಿಗಳು ವೃಂದದ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದ್ದು ಇವರಲ್ಲಿ ಕೆಲವು ಅಧಿಕಾರಿಗಳು ಉಲ್ಲೇಖ (5) ರ ಸರ್ಕಾರದ ಆದೇಶದಲ್ಲಿ ಕಲ್ಪಿಸಿರುವ ಅವಕಾಶದ ಮೇರೆಗೆ ಸ್ವಯಂಚಾಲಿತ ವೇತನ ಬಡ್ತಿ ಪಡೆದ ನಂತರ ಸ್ತಾನಪನ್ನ ಬಡ್ತಿಯ ವೇತನ ಶ್ರೇಣಿಯಲ್ಲಿ ವೇತನ ನಿಗಧಿಗೊಳಿಸುವಂತೆ ಕೋರಿ ನಿಗದಿತ ಅವಧಿಯೊಳಗೆ ಅಭಿಮತ ಪತ್ರ ಸಲ್ಲಿಸಿರುತ್ತಾರೆ. ಅಂತಹ ಅಧಿಕಾರಿಗಳು 15 ವರ್ಷಗಳ ನಿರಂತರ ಸೇವೆಯನ್ನು ಒಂದೇ ಹುದ್ದೆಯಲ್ಲಿ ಸಲ್ಲಿಸಿರುವುದರಿಂದ ಸ್ವಯಂಚಾಲಿತ ವೇತನ ಬಡ್ತಿಗೆ ಅರ್ಹರಿರುತ್ತಾರೆ.

ಈ ಅರ್ಹ ಅಧಿಕಾರಿಗಳು ಅವರ ಮೇಲಾಧಿಕಾರಿಗಳ ಮೂಲಕ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ಈ ಕಛೇರಿಗೆ ಸಲ್ಲಿಸಿರುವುದನ್ನು ದಿನಾಂಕ:– 18–08–2010 ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ಮುಂದೆ ಮಂಡಿಸಿ ಕೂಲಂಕುಶವಾಗಿ ಪರಿಶೀಲಿಸಲಾಯಿತು.

ಸ್ವಯಂಚಾಲಿತ ವೇತನ ಬಡ್ತಿಯನ್ನು ಮಂಜೂರು ಮಾಡಲು ಅಗತ್ಯ ದಾಖಲೆಗಳಾದ 10 ವರ್ಷಗಳ ಕಾಲಮಿತಿ ಬಡ್ತಿ ಮಂಜೂರಾತಿ ಆದೇಶಗಳು, 05 ವರ್ಷದ ಕಾರ್ಯ ನಿರ್ವಹಣಾ ವರದಿಗಳು/ ವಿಶೇಷ ವರದಿಗಳು ಶಿಸ್ತು ಕ್ರಮ ಬಾಕಿಇಲ್ಲದಿರುವ ಬಗ್ಗೆ ವರದಿ ಹಾಗೂ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ದಾಖಲೆಗಳನ್ನು ಪರಿಶೀಲಿಸಿ ಎಲ್ಲಾ ದಾಖಲೆಗಳು ಸಮರ್ಪಕವಾಗಿದ್ದು ಸ್ವಯಂ ಚಾಲಿತ ವೇತನ ಬಡ್ತಿಗೆ ಅರ್ಹರಿರುವುದರಿಂದ ಹಾಲಿ ಇರುವ ವೇತನ ಶ್ರೇಣಿ

ರೂ 12000-22650 ರಿಂದ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಶ್ರೇಣಿ ರೂ 14050-25050 ರಲ್ಲಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ:

ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವೃಂದಕ್ಕೆ ಸೇರಿದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದ ಗ್ರೂಪ್-ಬಿ ಹುದ್ದೆಯಲ್ಲಿ ಯಾವುದೇ ಬಡ್ತಿ ಇಲ್ಲದೆ ನಿರಂತರವಾಗಿ 15 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಹಾಗೂ ಕೆಲವು ಅಧಿಕಾರಿಗಳು ಶಿಕ್ಷಣಾಧಿಕಾರಿ ವೃಂದಕ್ಕೆ ಬಡ್ತಿ ಹೊಂದಿದ್ದರೂ ಹಳೆಯ ವೇತನ ಶ್ರೇಣಿಯಲ್ಲಿ ಮುಂದುವರೆಯಲು ನಿಗಧಿತ ಅವಧಿಯಲ್ಲಿ ಅಭಿಮತ ಪತ್ರ ನೀಡಿರುವುದರಿಂದ ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಿದ 17 ಅಧಿಕಾರಿಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕ ಮತ್ತು ವೇತನ ಶ್ರೇಣಿಯಲ್ಲಿ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿಯನ್ನು ಮಂಜೂರು ಮಾಡಿದೆ.

| ಕ್ರ.ಸಂ | ಅಧಿಕಾರಿಗಳ ಹೆಸರು, ಪದನಾಮ ಹಾಗೂ ಸೇವೆ ಸಲ್ಲಿಸುತ್ತಿರುವ ಕಛೇರಿ ವಿಳಾಸ | ಗ್ರೂಪ್-ಬಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡಿದ ದಿನಾಂಕ | ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ | 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಯಲ್ಲಿ ನಿಗಧಿ ಪಡಿಸ ಬೇಕಾದ ವೇತನ ಶ್ರೇಣಿ |
|---|---|---|---|---|---|
| 01 | ಬಿ. ಎಲ್. ಶರಶ್ಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮೂಡಿಗೆರೆ, ಚಿಕ್ಕಮಗಳೂರು-ಜಿಲ್ಲೆ | 21-01-1994 | 21-01-2009 | 12000-22650 | 13000-23850 |
| 02 | ಸಿ. ಆರ್. ಪರಮೇಶ್ವರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತರೀಕೆರೆ, ಚಿಕ್ಕಮಗಳೂರು-ಜಿಲ್ಲೆ | 21-01-1994 | 21-01-2009 | 12000-22650 | 13000-23850 |
| 03 | ಹೆಚ್. ಎಂ ಬಸಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು | 05-02-1994 | 05-02-2009 | 12000-22650 | 13000-23850 |
| 04 | ಕೆ. ಎನ್. ಜಯಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೀರೂರು, ಚಿಕ್ಕಮಗಳೂರು-ಜಿಲ್ಲೆ | 17-01-1994 | 17-01-2009 | 12000-22650 | 13000-23850 |
| 05 | ಎಸ್. ರಘುನಾಥರೆಡ್ಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ಚಿಕ್ಕಬಳ್ಳಾಪುರ-ಜಿಲ್ಲೆ | 17-01-1994 | 17-01-2009 | 12000-22650 | 13000-23850 |
| 06 | ಕೆ. ಸಿ. ಮಲ್ಲಿಕಾರ್ಜುನ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊನ್ನಾಳಿ, ದಾವಣಗೆರೆ-ಜಿಲ್ಲೆ | 17-01-1994 | 17-01-2009 | 12000-22650 | 13000-23850 |
| 07 | ಎನ್. ಜಿ. ಗುರುಪ್ರಸಾದ್, ಉಪನ್ಯಾಸಕರು, ಸಿ.ಟಿ.ಇ, ಚಿತ್ರದುರ್ಗ | 17-01-1994 | 17-01-2009 | 12000-22650 | 13000-23850 |
| 08 | ಎಂ. ಎಸ್. ಪ್ರಸನ್ನಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹರಿಹರ, ದಾವಣಗೆರೆ-ಜಿ | 20-01-1994 | 20-01-2009 | 12000-22650 | 13000-23850 |
| 09 | ಎಲ್. ಸಿದ್ದಲಿಂಗಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕಾರಿಪುರ, ಶಿವಮೊಗ್ಗ-ಜಿಲ್ಲೆ | 21-01-1994 | 21-01-2009 | 12000-22650 | 13000-23850 |

| | | | | | |
|---|---|---|---|---|---|
| 10 | ಸಿ. ಎನ್. ರಮೇಶ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊಪ್ಪ, ಚಿಕ್ಕಮಗಳೂರು–ಜಿಲ್ಲೆ | 20–01–1994 | 20–01–2009 | 12000–22650 | 13000–23850 |
| 11 | ಹೆಚ್. ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ನರಸಿಂಹರಾಜಪುರ, ಚಿಕ್ಕಮಗಳೂರು–ಜಿಲ್ಲೆ | 19–01–1994 | 19–01–2009 | 12000–22650 | 13000–23850 |
| 12 | ಸಿದ್ದಗಂಗಯ್ಯ, ಉಪನ್ಯಾಸಕರು(ನಿ–32), ಸಿ.ಟಿ.ಇ ಚಿತ್ರದುರ್ಗ | 17–01–1994 | 17–01–2009 | 12000–22650 | 13000–23850 |
| 13 | ಟಿ. ಭಾಸ್ಕರ ಶೆಟ್ಟಿ, ಹಿರಿಯ ಉಪನ್ಯಾಸಕರು, (ನಿ–32) ಡಯಟ್, ಉಡುಪಿ | 27–01–1994 | 27–01–2009 | 12000–22650 | 13000–23850 |
| 14 | ಸಿ. ರಂಗಧಾಮಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು, (ನಿ–32) ಕಾರ್ಕಳ, ಉಡುಪಿ–ಜಿಲ್ಲೆ | 04–03–1994 | 04–03–2009 | 12000–22650 | 13000–23850 |
| 15 | ಜಾಹ್ನವಿ. ಸಿ. ಹಿರಿಯ ಉಪನ್ಯಾಸಕರು, (ನಿ–32) ಡಯಟ್, ಉಡುಪಿ | 19–01–1994 | 19–01–2009 | 12000–22650 | 13000–23850 |
| 16 | ಡಿ. ಆರ್. ಕೃಷ್ಣಮೂರ್ತಿ, ಶಿಕ್ಷಣಾಧಿಕಾರಿಗಳು(ನಿ–32), ಉಪ ನಿರ್ದೇಶಕರ ಕಛೇರಿ, ಸಾ.ಶಿ. ಇಲಾಖೆ, ದಾವಣಗೆರೆ | 19–01–1994 | 19–01–2009 | 12000–22650 | 13000–23850 |
| 17 | ನಾಗರತ್ನಮ್ಮ .ಹೆಚ್ ಉಪನ್ಯಾಸಕರು, (ನಿ–32) ಸಿ.ಟಿ.ಇ, ವಸಂತ ಮಹಲ್, ಮೈಸೂರು | 10–08–1994 | 10–08–2009 | 12000–22650 | 13000–23850 |

**(ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ)**

(ಕೆ. ಕೃಷ್ಣೇಗೌಡ)
ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಪರವಾಗಿ

ಇವರಿಗೆ:–

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಅಪರ ಆಯುಕ್ತರು, ಧಾರವಾಡ ಇವರಿಗೆ ಮಾಹಿತಿಗಾಗಿ
3. ಮಹಾ ಲೇಖಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರುಗಳಿಗೆ ಮಾಹಿತಿಗಾಗಿ
5. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮಾಹಿತಿಗಾಗಿ
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗೀಯ ಸಹ ನಿರ್ದೇಶಕರುಗಳಿಗೆ/ ಸಿ.ಟಿ.ಇ. ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ
7. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪ ನಿರ್ದೇಶಕರುಗಳಿಗೆ ಮಾಹಿತಿಗಾಗಿ
8. ಸಂಬಂಧಿಸಿದ ಅಧಿಕಾರಿಗಳಿಗೆ
9. ಕಛೇರಿ ಪ್ರತಿ